ಸದರಿ. ನೌಕರರಿಗೆ ಸಂಬಳವನ್ನು ತೆಗೆದುಕೊಳ್ಳುವಂತೆ ದಿನಾಂಕ ೧–೭–೮೫, ೨೮–೭–೮೫ ಮತ್ತು ೭–೮–೮೫ರಲ್ಲಿ ಮೆಮೋ ನೀಡಿರುತ್ತಾರೆಂದು ಕೊಟ್ಟಿರುತ್ತೀರಿ- ಆದರೆ ೨೪–೭–೮೫ರಲ್ಲಿ ಮಾತ್ರ ಮೆಮೋ ಕೊಟ್ಟಿದ್ದೀರಿ. ಮೊದಲಿನತಾರೀಖುಗಳಲ್ಲಿ ಕೊಟ್ಟಿರುವಂತಹ ಉತ್ತರ ಸತ್ಯಕ್ಕೆ ದೂರವಾದ ಅಂಶವಾಗಿದೆ ಅದರ ಬಗ್ಗೆ ಉತ್ತರಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.— ನಾವು ಅಟೆಂಡೆನ್ಸ್ ನೋಡಿ ಉತ್ತರ ಕೊಡುವುದು ಸಾಧ್ಯವಿಲ್ಲದಿರುವಂತಾದ್ದು. ಅಧಿಕಾರಿಗಳಿಂದ ಬಂದಂತಹ ಮಾಹಿತಿ ಮೇಲೆ ಉತ್ತರ ಕೊಟ್ಟಿದ್ದೇವೆ. ಇದರಲ್ಲಿ ಸತ್ಯಕ್ಕೆ ದೂರವಾದ ಪ್ರಸಂಗಗಳಿದ್ದರೆ, ಅದನ್ನು ನಮಗೆ ತೋರಿಸಿಕೊಟ್ಟರೆ, ಸತ್ಯಕ್ಕೆ ದೂರವಾದ ಮಾಹಿತಿಗಳನ್ನು ಯಾವ ಅಧಿಕಾರಿಗಳು ಕೊಟ್ಟಿದ್ದಾರೆಯೋ, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ತಮ್ಮಲ್ಲಿ ಮಾಹಿತಿ ಇದ್ದರೆ ಅದನ್ನು ಕಳಿಸಿಕೊಟ್ಟರೆ, ಅಧಿಕಾರಿಗಳು ತಪ್ಪು ಹೇಳಿಕೆಕೊಟ್ಟಿದ್ದರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ. — ಈ ಪರಿಸ್ಥಿತಿ ಯಾವ ಹಂತಕ್ಕೆ ಮುಟ್ಟಿದೆಯೆಂದು ಹೇಳಿದರೆ. ತಮ್ಮ ಸಂಬಳಕ್ಕಾಗಿ, ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿಯನ್ನು ಸಹ ಸಲ್ಲಿಸಿದ್ದಾರೆ. ದಿನಾಂಕ ೧೬–೭–೮೫ ರಂದು ಸಿ. ಎಮ್. ಲೆಟರ್ ೧೦೮೪ ಡಿ.ಇ ಪಿ. ೮೫ರ ಪ್ರಕಾರ ಪತ್ರ ಬರೆದರೂ ಸಹ ಮೂರು ತಿಂಗಳ ಸಂಬಳವನ್ನು ತೆಗೆದುಕೊಳ್ಳಲಿಕ್ಕೆ ಆಗಿಲ್ಲ. ಪ್ರಥಮ ದರ್ಜೆ ನೌಕರರಿಂದ ಸಂಬಳ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗದ ರೀತಿಯಲ್ಲಿ ಶೋಷಣೆ ನಡೆಯುತ್ತಿದೆಯೇನು ಎಂತಹ ಪ್ರಶ್ನೆಯನ್ನು ಕೇಳಲಿಚ್ಛಿಸುತ್ತೇನೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳನ್ನು ತಕ್ಷಣ ಅಮಾನತ್ತಿನಲ್ಲಿ ಇಡುವಂತಹ ಕ್ರಮವನ್ನು ತೆಗೆದುಕೊಳ್ಳುತ್ತೀರಾ ಎಂದು ಕೇಳಲಿಚ್ಛಿಸುತ್ತೇನೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.— ನಮಗೆ ಕೊಟ್ಟಿರುವಷ್ಟಕ್ಕಂತಹ ಮಾಹಿತಿಯಲ್ಲಿ ಏನಾದರೂ ತಪ್ಪಾಗಿದ್ದರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ. ಅವರ ಹತ್ತಿರ ಇರತಕ್ಕಂಥ ಮಾಹಿತಿಯನ್ನು ಕೊಡಲಿ, ಅದನ್ನು ಪರಿಶೀಲನೆ ಮಾಡುತ್ತೇನೆ. ತಪ್ಪು ಮಾಹಿತಿ ಕೊಟ್ಟಿದ್ದರೆ. ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ನಿಯಮ 34 ರ ಮೇರೆಗೆ

೧) ತರೀಕೆರೆ ತಾಲ್ಲೂಕಿನ ಗ್ರಾಮಾಂತರ ಪ್ರದೇಶಗಳಿಗೆ ಕುಡಿಯುವ ನೀರನ್ನು ಒದಗಿಸುವ ಬಗ್ಗೆ.—

ಶ್ರೀ ಬಿ, ಆರ್. ನೀಲಕಂಠಪ್ಪ.— ಮಾನ್ಯ ಅಧ್ಯಕ್ಷರೇ, ತರೀಕೆರೆ ತಾಲ್ಲೂಕಿಗೆ ೧೯೮೧ನೇ ಜನ ಗಣತಿಯ ಪ್ರಕಾರ ಗ್ರಾಮಾಂತರ ಕುಡಿಯುವುದಕ್ಕಾಗಿ ನೀರಿನ ಯೋಜನೆಯಲ್ಲಿ ಎಷ್ಟನ್ನು ಅಳವಡಿಸಬಹುದು, ಸಣ್ಣ ಪ್ರಮಾಣದ ಕುಡಿಯುವ ನೀರಿನ ಯೋಜನೆಯನ್ನು ಎಷ್ಟು ಅಳವಡಿಸಬಹುದು? ಗ್ರಾಮೀಣ ಕುಡಿಯುವ ನೀರಿನ ಯೋಜನೆ ಪರಿಸ್ಥಿತಿ ಹೇಗಿದೆ? ಹಾಗೂ ಎಷ್ಟಿವೆ. ಅವುಗಳು ಯಾವ ಹಂತದಲ್ಲಿವೆ? ತರೀಕೆರೆ ತಾಲ್ಲೂಕು ಕುಡಿಯುವ ನೀರಿನ ವ್ಯವಸ್ಥೆ ಹಾಳಾಗಿರುವ ಬಗ್ಗೆ ಏನು ಕ್ರಮ ಕೈಗೊಂಡಿದ್ದೀರಿ? ಇದನ್ನು ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಜೆ. ಹೆಚ್. ಪಟೇಲ್ (ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು).— ಮಾನ್ಯ ಸದಸ್ಯರು ಕೇಳಿದಂತಹ ಪ್ರಶ್ನೆಗಳಿಗೆ ಉತ್ತರ ನೀಡಲು ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸುತ್ತೇನೆ.

2) ಕೊಳ್ಳೇಗಾಲ ತಾಲ್ಲೂಕಿನಲ್ಲಿ ಏಕೋಪಾಧ್ಯಾಯ ಪಾಠಶಾಲೆಗಳಲ್ಲಿ ಉಪಾಧ್ಯಾಯರುಗಳು ಇಲ್ಲದಿರುವ ಬಗ್ಗೆ.

ಶ್ರೀ ಹೆಚ್. ಜಿ. ರಾಜೂಗೌಡ.— ಮಾನ್ಯ ಅಧ್ಯಕ್ಷರೆ, ಕೊಳ್ಳೇಗಾಲ ತಾಲ್ಲೂಕಿನಲ್ಲಿ ಇಂದಿನವರೆಗೂ ಮೂವತ್ತೈದು ಏಕೋಪಾಧ್ಯಾಯ ಪಾಠಶಾಲೆಗಳಲ್ಲಿ ಉಪಾಧ್ಯಾಯರು ಬಾರದೇ ಮಕ್ಕಳಿಂದ ಪಾಠಶಾಲೆಗಳು ಇನ್ನೂ ಬೀಗಮುದ್ರಾವಸ್ಥೆಯಲ್ಲಿಯೇ ಇರುತ್ತದೆ. ಸರ್ಕಾರದ ಮೇಲೆ ಈ ಬಗ್ಗೆ ನಾನಾ ತರದ ಒತ್ತಾಯ ತಂದರೂ ನನ್ನ ಬೇಡಿಕೆಗೆ ಮನ್ನಣೆ ದೊರೆತಿಲ್ಲ. ನಮ್ಮ ಕ್ಷೇತ್ರಕ್ಕೆ ಹೋದರೆ ಪೋಷಕರ

ಹೊಡೆತ, ಇಲ್ಲಿಗೆ ಬಂದು ಹೇಳಿದರೆ, ಸರ್ಕಾರದ ಆನಾಧೋರಣೆ ಇವೆರಡರ ಮಧ್ಯೆ ಇಕ್ಕಳಕ್ಕೆ ಸಿಕ್ಕಿದ ಅಡಿಕೆಯಂತೆ ನಮ್ಮ ಪರಿಸ್ಥಿತಿ ಆಗಿದೆ. ನನ್ನ ಪರಿಸ್ಥಿತಿ ಈಗಲಾದರೂ ಈ ಬಗ್ಗೆ ಜರೂರು ಗಮನ ಕೊಟ್ಟು ಈ ತಿಂಗಳ ಒಳಗಾದರೂ ಆ ಎಲ್ಲಾ ಏಕೋಪಾಧ್ಯಾಯ ಪಾಠಶಾಲೆಗಳಿಗೂ ಹೊರಗಿನ ಉಪಾಧ್ಯಾಯರನ್ನು ಹಾಕಿ ಭರ್ತಿ ಮಾಡಿ ನಾನು ಸುಗಮವಾಗಿ ನನ್ನ ಮತದಾರ ಕ್ಷೇತ್ರಕ್ಕೆ ಹೋಗಲು ಅವಕಾಶ ಮಾಡಿಕೊಡುವುದರ ಜೊತೆಗೆ ಕೇಂದ್ರ ಸರ್ಕಾರದ ನೀತಿಯಂತೆ ಪ್ರತಿಯೊಂದು ಪಾಠ ಶಾಲೆಗೂ ಕೊನೆ ಪಕ್ಷ ಎರಡು ಉಪಾಧ್ಯಾಯರನ್ನಾದರೂ ಮುಂದಿನ ಶೈಕ್ಷಣಿಕ ವರ್ಷದಿಂದಲಾದರೂ ಹಾಕಿಕೊಡಬೇಕೆಂದು ಒತ್ತಾಯಪೂರ್ವಕವಾಗಿ ಸಹಕಾರವನ್ನು ಕೇಳಲು ಇಚ್ಛಿಸುತ್ತೇನೆ.

ಶ್ರೀ ಹೆಚ್. ಜಿ. ಗೋವಿಂದೇ ಗೌಡ (ಮಾನ್ಯ ಪ್ರಾಥಮಿಕ ಮತ್ತು ವಯಸ್ಕ ಶಿಕ್ಷಣ ಮಂತ್ರಿಗಳು) ಮಾನ್ಯ ಅಧ್ಯಕ್ಷರೆ, ಕೊಳ್ಳೇಗಾಲ ತಾಲ್ಲೂಕಿನ ೩೦ ಏಕೋಪಾಧ್ಯಾಯ ಶಾಲೆಗಳ ಪೈಕಿ ೨೮ ಶಾಲೆಗಳಿಗೆ ಶಿಕ್ಷಕರನ್ನು ಬೇರೆ ಶಾಲೆಗಳಿಂದ ನಿಯೋಜಿಸಿ ಶಾಲೆಗಳನ್ನು ನಡೆಸಲಾಗುತ್ತಿದೆ. ಕಿರಿಯ ಪ್ರಾಥಮಿಕ ಶಾಲೆ, ಕೋಣನಕೆರೆ ಮತ್ತು ತಮಿಳು ಪ್ರಾಥಮಿಕ ಶಾಲೆ, ಜಿಲ್ಲಿಪಾಳ್ಯ ಈ ಎರಡು ಶಾಲೆಗಳಲ್ಲಿ ಮಕ್ಕಳ ಸಂಖ್ಯೆಯೇ ಇಲ್ಲದಿರುವುದರಿಂದ ಸದರಿ ಶಾಲೆಗಳ ಶಿಕ್ಷಕರನ್ನು ಬೇರೆ ಅವಶ್ಯಕತೆ ಇರುವ ಶಾಲೆಗಳಿಗೆ ಸ್ಥಳಾಂತರಗೊಳಿಸಲಾಗಿದೆ. ಕೊಳ್ಳೇಗಾಲ ತಾಲ್ಲೂಕಿನ ಎಲ್ಲಾ ಏಕೋಪಾಧ್ಯಯ ಶಾಲೆಗಳೂ ನಡೆಯುತ್ತಿವೆ.

3) ಕುಂದಾಪುರದ ಕೆಲವು ಗ್ರಾಮಗಳಿಗೆ ಸಮುದ್ರದ ನೀರು ನುಗ್ಗಿ ರೈತರ ಭತ್ತದ ಬೆಳೆಗೆ ಹಾನಿಯುಂಟಾಗಿರುವ ಬಗ್ಗೆ.

ಶ್ರೀ ಪ್ರತಾಪಚಂದ್ರಶೆಟ್ಟಿ.—ಮಾನ್ಯ ಅಧ್ಯಕ್ಷರೆ, ಕುಂದಾಪುರ ಕ್ಷೇತ್ರದ ಗೋಪಾಡಿ ಮತ್ತು ಬಿಜಾಡಿ ಗ್ರಾಮದ ಕೆಲವು ಸ್ಥಳಗಳಿಗೆ ಸಮುದ್ರದ ಉಪ್ಪು ನೀರು ಗದ್ದೆಗೆ ನುಗ್ಗುವುದರಿಂದ ಸಣ್ಣ ಹಾಗೂ ಅತಿ ಸಣ್ಣ ರೈತರ ಭತ್ತದ ಬೆಳೆಗೆ ಹಾತಿಯಾಂಟಾಗಿರುತ್ತದೆ ಹಿಂದುಳಿದ ಬೆಸ್ತ ಜನಾಂಗದವರೇ ಹೆಚ್ಚಾಗಿರುವ ಈ ಪ್ರದೇಶದಲ್ಲಿ ಉಪ್ಪು ನೀರು ಗದ್ದೆಗೆ ನುಗ್ಗುವುದನ್ನು ತಡೆಗಟ್ಟಲು ಅತೀ ಜರೂರು ತಡೆಗೋಡೆಯನ್ನು, ನಿರ್ಮಿಸುವುದು ಸೂಕ್ತವಾದುದೆಂಬುದನ್ನು ಮನಗಂಡು ಈ ವಿಚಾರವನ್ನು ಸದನದ ಮುಂದೆ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಸಿ ಬೈರೇಗೌಡ (ಮಾನ್ಯ ಮೀನುಗಾರಿಕೆ ಮತ್ತು ಬಂದರು ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ಈಗತಾನೆ ಈ ವಿಷಯವನ್ನು ನನ್ನ ಗಮನಕ್ಕೆ ತರುತ್ತಿದ್ದಾರೆ. ಇದರ ಬಗ್ಗೆ ಮಾಹಿತಿಯನ್ನು ತರಿಸಿ ಸದನದಲ್ಲಿ ಹೇಳಿಕೆ ಕೊಡುತ್ತೇನೆ.

4) ಸಾಗರ ತಾಲ್ಲೂಕಿನ ಭಾರಂಗಿ ಮತ್ತು ಕರೂರು ಹೋಬಳಿಯ ರೈತರು ಬೆಳೆದ ಫಸಲು ಹಾಳಗುತ್ತಿರುವ ಬಗ್ಗೆ.

ಶ್ರೀ ಜಿ. ಧರ್ಮಪ್ಪ.—ಅಧ್ಯಕ್ಷರೆ, ಸಾಗರ ತಾಲ್ಲೂಕು ಭಾರಂಗಿ ಮತ್ತು ಕರೂರು ಹೋಬಳಿಗಳಲ್ಲಿ 'ಅಭಯಾರಣ್ಯ' ವೆಂದು ಅರಣ್ಯ ಇಲಾಖೆಯವರು ಬೋರ್ಡುಗಳನ್ನು ಹಾಕಿರುತ್ತಾರೆ. ಅಲ್ಲಿ ಹಗಲು ಹೊತ್ತೇ ರೈತರು ಬೆಳೆದ ಫಸಲನ್ನು ಕಾಡು ಪ್ರಾಣಿಗಳು ತಿಂದು ಹಾಕುತ್ತಿವೆ. ಸಾಕಷ್ಟು ಜಾನುವಾರುಗಳನ್ನು ಹುಲಿಗಳು ತಿಂದು ಹಾಕಿರುವುದರಿಂದ ಪರಿಹಾರಕ್ಕಾಗಿ ಹಾಕಿದ ಅರ್ಜಿಗಳು ವಿಲೇವಾರಿ ಆಗಿಲ್ಲ. ಈ ಮಧ್ಯೆ ಈ ಪ್ರದೇಶವನ್ನು ಅಭಯಾರಣ್ಯವಾಗಿ ಪರಿವರ್ತಿಸಿದರೆ ಅಲ್ಲಿ ವಾಸಿಸುವ ಬೇಸಾಯಗಾರರಿಗೆ ಯಾವ ರಕ್ಷಣೆಯನ್ನು ಸರ್ಕಾರ ಒದಗಿಸುತ್ತದೆಂಬುದು ಅಲ್ಲಿನವರ ಪ್ರಶ್ನೆ.

ಹಾಗೂ ಅರಣ್ಯಾಧಿಕಾರಿಗಳು ಸರ್ಕಾರಿ ಆದೇಶ ವೆಯೆಂದು ಹೇಳಿ ಫಸಲು ರಕ್ಷಣೆಯ ಬಂದೂಕು ಗಳನ್ನೆಲ್ಲಾ ತರಿಸಿಕೊಂಡು ಯಾವ ಕಾರಣವನ್ನೂ ಕೊಡದೇ ಇಟ್ಟುಕೊಂಡಿರುತ್ತಾರೆ. ಇದರ ಉದ್ದೇಶ ವೇನು? ಎಂಬುದರ ಬಗ್ಗೆ ಸರ್ಕಾರದ ಗಮನ ಸೆಳೆಯು ಬಯಸುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್ (ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು).—ಅಧ್ಯಕ್ಷರೆ, ಮಾನ್ಯ ಸದಸ್ಯರು ಪ್ರಸ್ತಾಪಮಾಡಿರತಕ್ಕ ವಿಷಯವನ್ನು ಸರ್ಕಾರ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆ.